ದಿನಾಂಕಃ 01-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲು ಃ ವಾದಿ ಪರ ಶ್ರೀ ಎಮ್ ಬಿ ಬಿ ವಕೀಲರಿಂದಃ</u>

2. ಈ ದಾವೆಯನ್ನು ಯಾರು ಹಾಕಿರುತ್ತಾರೆ ಎಂದು ಗೊತ್ತಿಲ್ಲ. ದಾವಾ ಆಸ್ತಿ ನಂಬರ 21/1, ಕ್ಷೇತ 3 ಎಕರೆ 5 ಗುಂಟೆ. ಆಸ್ತಿಯ ಮೇಲೆ ಮಾತ್ರ ಹಾಕಿರುತ್ತಾರೆ. ಉಳಿದ ಆಸ್ತಿಗಳ ವಿಚಾರ ಗೊತ್ತಿಲ್ಲ. ವಾದಿ ಸಲ್ಲಿಸಿರುವ ವಾದ ಪತ್ರವನ್ನು ಓದಿಸಿ ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ. 21/1 ವಿಭಜನೆ ಆಗಿ 21/6 ಕ್ಷೇತ್ರ 2 ಎಕರೆ 3 ಗುಂಟೆ 21/1 ಕ್ಷೇತ್ರ 1 ಎಕರೆ 2 ಗುಂಟೆ ಆಗಿದೆ ಎಂದರೆ ಸರಿ. ಸದರಿ ಆಸ್ತಿಯ ಚಕಬಂದಿ ಗೊತ್ತಿಲ್ಲ. 21/4 ಕ್ಷೇತ್ರ 2 ಎಕರೆ ಸ್ವತ್ತಿನ ವಿಚಾರ ನನಗೆ ಗೊತ್ತಿಲ್ಲ. ವಿ ಪಿ ಸಿ ನಂಬರ 535 ಮನೆ ಸಂಬಂಧ ಈ ದಾವಾ ಹಾಕಿದ್ದಾರೆ ಎಂದರೆ ಗೊತ್ತಿಲ್ಲ.

3. ವಾದಿಯರ ತಂದೆ ಗುರುಪಾದಯ್ಯ ಅವರು ತೀರಿಕೊಂಡಿರುತ್ತಾರೆ. ಸದರಿಯವರಿಗೆ ಸಾವಂತ್ರೆವ್ವ ಎಂಬ ಹೆಂಡತಿ ಇದ್ದಳು. ಸದರಿಯವರು ಸಹ ತೀರಿಕೊಂಡಿರುತ್ತಾರೆ. ನೀಲವ್ವ, ಈರಮ್ಮ ಮತ್ತು ಬಸಮ್ಮ ಎಂಬ ಮೂವರು ಹೆಣ್ಣು ಮಕ್ಕಳು ಗದಿಗಯ್ಯ ಮತ್ತು ಶಿವರುದ್ರಯ್ಯ ಎಂಬ ಇಬ್ಬರೂ ಗಂಡು ಮಕ್ಕಳು ಎಂದರೆ ಸರಿ. ಗುರುಪಾದಯ್ಯನಿಗೆ ಈ ಐವರು ಮಕ್ಕಳನ್ನು ಹೊರತು ಪಡಿಸಿ ಬೇರೆ ವಾರಸುದಾರರು ಇಲ್ಲ ಎಂದರೆ ಸರಿ. ದಾವೆಯನ್ನು ಬಸಮ್ಮ ಮತ್ತು ಈರಮ್ಮ ಹಾಕಿರುತ್ತಾರೆ ಎಂದರೆ ಸರಿ. ಸದರಿ ದಾವಾದಲ್ಲಿ ಗುರುಪಾದಯ್ಯನ ಉಳಿದ ಮಕ್ಕಳ ಮೇಲೆ ದಾವಾ ಹಾಕಿದ್ದಾರೆ ಎಂದರೆ ಸರಿ. ಈ ಮೇಲಿನ ಆಸ್ತಿ ಹೊರತು ಪಡಿಸಿ ಗುರುಪಾದಯ್ಯನ ಕುಟುಂಬಕ್ಕೆ ಬೇರೆ ಆಸ್ತಿ ಇಲ್ಲ ಎಂದರೆ ಸರಿ. ಸದರಿ ದಾವಾ ಆಸ್ತಿಗಳು ಗುರುಪಾದಯ್ಯನಿಗೆ ತಮ್ಮ ಸಹೋದರರ ನಡುವೆ ಆದ ವಾಟ್ನಿಯಲ್ಲಿ ಬಂದಿದೆ ಎಂದರೆ ಸರಿ. ದಾವಾ ಆಸ್ತಿಗಳನ್ನು ಗುರುಪಾದಯ್ಯ ಮತ್ತು ಆತನ ಮಕ್ಕಳು ಸಾಮೂಹಿಕ ಮಾಲ್ಕಿ ಕಬ್ಜಾ ವಹಿವಾಟಿನಲ್ಲಿ ಇದೆ ಎಂದರೆ ಸರಿ. ದಾವಾ ಆಸ್ತಿಗಳು ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಗಳ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ಇಂದಿಗೂ ಗುರುಪಾದಯ್ಯನ ಮಕ್ಕಳ ನಡುವೆ ಹಿಸ್ಸಾ ಆಗಿಲ್ಲ ಎಂದರೆ ಸರಿ. ಗುರುಪಾದಯ್ಯ ತೀರಿಕೊಂಡ ನಂತರ ವಾದಿಗಳು ಮತ್ತು ಪ್ರತಿವಾದಿಗಳು ಹಿಂದಿನಂತೆ ಸಾಮೂಹಿಕ ಕಬ್ಜಾ ವಹಿವಾಟನ್ನು ಮುಂದುವರೆಸಿಕೊಂಡು ಬಂದಿರುತ್ತಾರೆ ಎಂದರೆ ಸರಿ. ವಾದಿಗೂ ಸಹ ದಾವಾ ಆಸ್ತಿಯಲ್ಲಿ ಹಕ್ಕಿದೆ ಎಂದರೆ ಸರಿ.

4. ದಾವಾದಲ್ಲಿ ನಾನು ತಕರಾರು ಹಾಕಿದ್ದೇನೆ. ಸದರಿ ತಕರಾರನ್ನು ಬರೆಯಲು ಮಾಹಿತಿಯನ್ನು ನಾನೇ ಕೊಟ್ಟಿದ್ದೇನೆ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಮಾಹಿತಿ ನಾನೇ ಕೊಟ್ಟಿದ್ದೇನೆ. ಈ ದಾವಾದ 3 ನೇ ಪ್ರತಿವಾದಿ ಅಸಲು ದಾವಾ ನಂಬರ 136/2012 ರಂತೆ ದಾವಾ ಹಾಕಿದ್ದರು ಎಂದರೆ ಸಾಕ್ಷಿ ಅದು ನಮ್ಮ ಪರ ಆಗಿದೆ ಎಂದು ನುಡಿಯುತ್ತಾರೆ. ಸದರಿ ದಾವೆಯನ್ನು ಗುರುಪಾದಯ್ಯ ನನ್ನ ಮತ್ತು ನನ್ನ ತಮ್ಮನ ಮೇಲೆ ಹಾಕಲಾಗಿತ್ತು ಎಂದರೆ ಸರಿ. ಸದರಿ ದಾವೆಯನ್ನು ಸರ್ವೇ ನಂಬರ 21/3 ಕ್ಷೇತ್ರ 3 ಎಕರೆ 5 ಗುಂಟೆ ಜಮೀನಿನ ಮೇಲೆ ಹಾಕಲಾಗಿತ್ತು ಎಂದರೆ ಸರಿ. ಸದರಿ ದಾವಾದಲ್ಲಿ ನಾನು ತಕರಾರು ಹಾಕಿದ್ದೆ ಎಂದರೆ ಸರಿ. ಗುರುಪಾದಯ್ಯನ ಉಳಿದ ಮಕ್ಕಳನ್ನು ದಾವಾದಲ್ಲಿ ಸೇರಿಸಬೇಕೆಂದು ನಾನು ತಕರಾರು ಹಾಕಿದ್ದೆ ಎಂದರೆ ಸರಿ. ಅದರ ನಂತರ ಉಳಿದ ಕುಟುಂಬದ ಆಸ್ತಿಗಳನ್ನು ಸೇರಿಸಬೇಕೆಂದು ತಕರಾರು ಹಾಕಿದ್ದೆ ಎಂದರೆ ಸರಿಯಲ್ಲ. ಆ ಕಾರಣ ಸದರಿ ದಾವಾ ವಜಾ ಆಗಿದ್ದು ಎಂದರೆ ಸರಿ. ಸದರಿ ದಾವಾದಲ್ಲಿ ಈ ಕೇಸನ ವಾದಿ ಪಕ್ಷಕಾರರಾಗಿಲ್ಲ ಎಂದರೆ ಸರಿ. 3 ನೇ ಪ್ರತಿವಾದಿ ಅಪೀಲ ನಂಬರ 285/2017 ರಂತೆ ಜಿಲ್ಲಾ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದಳು ಎಂದರೆ ಸರಿ. ಸದರಿ ಮೇಲ್ಮನವಿ ಸಹ ವಜಾ ಆಗಿತ್ತು ಎಂದರೆ ಸರಿ. ಅಸಲು ದಾವಾ ನಂತರ 136/2012 ರಲ್ಲಿ ವಾದಿ ಪಕ್ಷಕಾರರಾಗಿಲ್ಲದ ಕಾರಣ ಸದರಿ ದಾವಾದ ತೀರ್ಪು ಮತ್ತು ಡಿಕ್ರಿ ಆಕೆಗೆ ಬಂಧನಕಾರಿಯಾಗಿಲ್ಲ ಎಂದರೆ ಸರಿ.

5. ಗುರುಪಾದಯ್ಯನಿಗೆ ಹೆಂಡತಿ ಮತ್ತು ಮಕ್ಕಳು ಇರುವುದು ಖರೀದಿ ಕಾಲಕ್ಕೆ ನನಗೆ ಗೊತ್ತಿತ್ತು ಎಂದರೆ ಸರಿ. ಆದರೆ ಅವರು ಬೇರೆ ಇದ್ದರು ಎಂದು ನುಡಿಯುತ್ತಾರೆ. ಗುರುಪಾದಯ್ಯನಿಗೆ ಅಡಚಣೆ ಏನಿತ್ತು ಎಂದರೆ ಬ್ಯಾಂಕಿನ ಸಾಲ ಇತ್ತು. ಆ ಸಂಬಂಧ ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ. ಕೆ ವಿ ಜಿ ಬ್ಯಾಂಕ ಸಾಲ ಇತ್ತು. ಸಾಲ ಎಷ್ಟಿತ್ತು ಎಂದು ಬ್ಯಾಂಕನಿಂದ ಕಾಗದ ಪತ್ರ ಪಡೆದು ಹಾಜರು ಪಡಿಸಿದ್ದೀರಾ ಎಂದರೆ ಹಾಜರು ಪಡಿಸಿದ್ದೇನೆ. ಖರೀದಿ ಮಾಡುವ ಪೂರ್ವದಲ್ಲಿ ಪತ್ರಿಕಾ ಪ್ರಕಟನೆ ಹೊರಡಿಸಿದ್ದು ಅದನ್ನು ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ. ಖರೀದಿ ಪತ್ರಕ್ಕೆ ಒಪ್ಪಿಗೆ ಸಹಿ ಮಾಡುವಂತೆ ಗುರುಪಾದಯ್ಯನ ಹೆಂಡತಿ ಮತ್ತು ಮಕ್ಕಳಿಗೆ ಕೇಳಿದ್ದೀರಾ ಎಂದರೆ ಕೇಳಿದ್ದೇನು. ಅವರು ನನಗೆ ಸಂಬಂಧವಿಲ್ಲ ಎಂದು ನುಡಿಯುತ್ತಾರೆ. ಗುರುಪಾದಯ್ಯನ ಮಕ್ಕಳು ವಯಸ್ಕರಿದ್ದರು ಎಂದು ನುಡಿಯುತ್ತಾರೆ. ಖರೀದಿ ಕಾಲಕ್ಕೆ ಗುರುಪಾದಯ್ಯನಿಗೆ 80 ವರ್ಷ ವಯಸ್ಸಿತ್ತು ಎಂದರೆ ಸರಿ. ಆ ಕಾರಣ ಆತನಿಗೆ ವ್ಯಾವಹಾರಿಕ ಜ್ಞಾನ ಇರಲಿಲ್ಲ ಎಂದರೆ ಸರಿಯಲ್ಲ. ಗುರುಪಾದಯ್ಯನಿಗೆ ಹಣ ಮುಟ್ಟಿದ ಬಗ್ಗೆ ಪಾವತಿ ರಸೀದಿ ಪಡೆದಿದ್ದೀರಾ ಎಂದರೆ ಪಡೆದಿದ್ದೇನೆ. ವ್ಯವಹಾರ ಮಾಡಿದ

ತಾರೀಖು, ತಿಂಗಳು ಮತ್ತು ಇಸ್ವೀ ನೆನಪಿಲ್ಲ. ಖರೀದಿ ಮಾತುಕತೆ ದಿನಾಂಕ ಗೊತ್ತಾ ಎಂದರೆ ನೆನಪಿಲ್ಲ. ಖರೀದಿ ಮಾಡುವ ಒಂದು ವಾರದ ಮೊದಲು ಆಗಿತ್ತು. ಆ ಸಮಯದಲ್ಲಿ ಸಂಚಕಾರ ಪತ್ರ ರೂ. 50,000/- ಕ್ಕೆ ಬರೆಸಿಕೊಂಡಿದ್ದೇವೆ. ಆ ಸಮಯದಲ್ಲಿ ವೀರಶೆಟ್ಟಿ ಮತ್ತು ದೇವಣ್ಣ ಇದ್ದರು. ಸದರಿ ಸಂಚಕಾರ ಪತ್ರ ಹಾಜರು ಪಡಿಸುತ್ತೀರಾ ಎಂದರೆ ಹಾಜರು ಪಡಿಸುತ್ತೇನೆ. ರೂ. 3,29,000/- ಕ್ಕೆ ಕ್ರಯಕ್ಕೆ ಪಡೆಯಲು ಮಾತುಕತೆ ಆಗಿತ್ತು. ಉಳಿದ ಹಣವನ್ನು ಖರೀದಿ ಹಿಡಿಯುವ ಕಾಲಕ್ಕೆ ಕೊಟ್ಟಿದ್ದೇವು. ಉಳಿದ ರೂ. 3,00,000/- ಹಣವನ್ನು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಕೊಟ್ಟಿದ್ದೇವೆ. ಖರೀದಿ ಪತ್ರದಲ್ಲಿ ರೂ. 50,000/- ಕೊಟ್ಟ ಬಗ್ಗೆ ಬರೆಸಿದ್ದೀರಾ ಎಂದರೆ ಇಲ್ಲ. ಗುರುಪಾದಯ್ಯನಿಗೆ ಬ್ಯಾಂಕ ಖಾತೆ ಇತ್ತು. ಸದರಿ ಖರೀದಿ ಹಣವನ್ನು ಬ್ಯಾಂಕ ಖಾತೆಗೆ ಜಮಾ ಮಾಡಲು ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ಖರೀದಿ ವ್ಯವಹಾರ ಮಾಡಿಲ್ಲ. ಸಂಚಕಾರ ಪತ್ರ ಮಾಡಿಲ್ಲ. ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗುರುಪಾದಯ್ಯ ವಯೋವೃದ್ದನಿದ್ದ ಕಾರಣ ಅದನನ್ನು ದುರುಪಯೋಗ ಪಡೆದುಕೊಂಡು ಖೊಟ್ಟಿ ಖರೀದಿ ಪತ್ರ ಖೊಟ್ಟಿ ಖರೀದಿ ಪತ್ರ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಖರೀದಿ ಮಾಡಿದ ಜಮೀನಿನ ಚಕಬಂದಿ ಹೇಳಲಾಗುತ್ತದೆಯಾ ಎಂದರೆ ಇಲ್ಲ. ಇಂದಿಗೂ ಸದರಿ ಆಸ್ತಿ ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಗಳ ಸಾಮೂಹಿಕ ಕಬ್ಜಾದಲ್ಲಿದೆ ಎಂದರೆ ಸರಿಯಲ್ಲ.

6. ಸದರಿ ಖರೀದಿ ಪತ್ರ ವಾದಿಗಳಿಗೆ ಬಂಧನಕಾಗಿಯಾಗುವುದಿಲ್ಲ ಎಂದರೆ ಸರಿಯಲ್ಲ. ಖೊಟ್ಟಿ ಖರೀದಿ ಪತ್ರದ ಆಧಾರದ ಮೇಲೆ ನನ್ನ ಹೆಸರಿನಲ್ಲಿ ಖೊಟ್ಟಿ ಖಾತೆ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಸರಿಗೆ ಕಾನೂನು ಬಾಹಿರ ಖಾತೆ ಇದ್ದ ಕಾರಣ ದುರುಪಯೋಗ ಪಡಿಸಿಕೊಂಡು 7 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ.  ಕಬ್ಜಾದಲ್ಲಿ ಇಲ್ಲದೇ ಇದ್ದರೂ ಸಹ ಖೊಟ್ಟಿ ಖರೀದಿ ಪತ್ರ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ 21/3 ಒಳ್ಳೇಯ ಫಲವತ್ತವೆಯ ಜಮೀನು ಎಂದರೆ ಸರಿಯಲ್ಲ. 2012 ರಲ್ಲಿ 1 ಎಕರೆ ಗೆ ರೂ. 4 ರಿಂದ 5 ಲಕ್ಷ ಬೆಲೆ ಇತ್ತು ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಮತ್ತು ಮುಖ್ಯ ವಿಚಾರಣೆಯಲ್ಲಿ ಬರೆಸಿರುವ ವಿಚಾರಗಳೆಲ್ಲ ಸುಳ್ಳು ಎಂದರೆ ಸರಿಯಲ್ಲ. ನಾನು ಪ್ರಾಮಾಣಿಕ ಖರೀದಿದಾರನಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**1** ರಿಂದ **4** ನೇ ಪ್ರತಿವಾದಿಗಳ ಪರ ವಕೀಲರು ಸಮಯ ಕೋರಿದ್ದು**,** ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

ಸಹಿ ಆಗಿದೆ

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ